# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1. | ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 1519 |
| 2. | ಸದಸ್ಯರ ಹೆಸರು | : | ಶ್ರೀ ಹೆಚ್. ಎಂ. ರೇವಣ್ಣ |
| 3. | ಉತ್ತರಿಸಬೇಕಾದ ದಿನಾಂಕ | : | 19-03-2020 |
| 4. | ಉತ್ತರಿಸುವ ಸಚಿವರು | : | ಮಾನ್ಯ ಜಲಸಂಪನ್ಮೂಲ ಸಚಿವರು |

| ಕ್ರ ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ | ರಾಮನಗರ ಜಿಲ್ಲೆ ಮಾಗಡಿ ತಾಲ್ಲೂಕಿನಲ್ಲಿ ಹಿಂದಿನ ಸರ್ಕಾರದಲ್ಲಿ ಶ್ರೀರಂಗ ಏತ ನೀರಾವರಿ ಕಾಮಗಾರಿ ಮಂಜೂರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು. |
| ಆ | ಈ ಕಾಮಗಾರಿಯು ಈಗ ಯಾವ ಹಂತದಲ್ಲಿದೆ; ಕಾಮಗಾರಿಗೆ ಇದುವರೆಗೂ ಎಷ್ಟು ಹಣ ಬಿಡುಗಡೆಯಾಗಿದೆ; ಕಾಮಗಾರಿಯು ವಿಳಂಬವಾಗುವುದಕ್ಕೆ ಕಾರಣವೇನು; (ಪೂರ್ಣ ಮಾಹಿತಿಯನ್ನು ನೀಡುವುದು) | ರಾಮನಗರ ಜಿಲ್ಲೆ ಮಾಗಡಿ ತಾಲ್ಲೂಕಿನ ಶ್ರೀರಂಗ ಏತ ನೀರಾವರಿ ಯೋಜನೆಯ ಪಂಪ್ ಹೌಸ್ ಕಾಮಗಾರಿ ಬಹುತೇಕ ಪೂರ್ಣಗೊಂಡಿದ್ದು, ಪಂಪು ಮತ್ತು ಮೋಟಾರ್‌ಗಳ ಅಳವಡಿಕೆ ಕಾಮಗಾರಿ ಪೂರ್ಣಗೊಂಡಿರುತ್ತದೆ. ವಿದ್ಯುತ್ ಸಬ್ ಸ್ಟೇಷನ್‌ನ ಸಿವಿಲ್ ಕಾಮಗಾರಿ ಹಾಗೂ ರೈಸಿಂಗ್ ಮೇನ್‌ನ ಕಾಮಗಾರಿ ಪ್ರಗತಿಯಲ್ಲಿದೆ. ಫೆಬ್ರವರಿ-2020 ರ ಅಂತ್ಯಕ್ಕೆ ರೂ.163.38 ಕೋಟಿಗಳು ವೆಚ್ಚವಾಗಿರುತ್ತದೆ.<br><br>ಈ ಕೆಳಕಂಡ ಕಾರಣಗಳಿಂದ ಕಾಮಗಾರಿಯು ವಿಳಂಬವಾಗಿರುತ್ತದೆ :-<br>1. ನೂತನ ಭೂಸ್ವಾಧೀನ ಕಾಯ್ದೆ-2013ರ ಅನ್ವಯ EIA/ SIA (Environmental Impact Assessment/ Social Impact Assessment) ಮಾಡಬೇಕಾಗಿದ್ದರಿಂದ.<br>2. ಸದರಿ ಕಾಮಗಾರಿಯ ಪಂಪ್‌ಹೌಸ್ ಮತ್ತು ವಿದ್ಯುತ್ ಸಬ್‌ಸ್ಟೇಷನ್ ನಿರ್ಮಿಸಲು ಖಾಸಗಿ ಜಮೀನು ದೊರೆಯದ ಕಾರಣ ಸಮೀಪದಲ್ಲೇ ಇದ್ದ ಗೊಟ್ಟಿಕೆರೆ ಹಿರೆಕೆರೆ ಕೆರೆಯ ಸರ್ಕಾರಿ ಜಾಗಕ್ಕೆ ಸ್ಥಳ ಬದಲಾಯಿಸಿದ್ದರಿಂದ.<br>3. ಸರ್ಕಾರಿ ಜಾಗಕ್ಕೆ ಸ್ಥಳ ಬದಲಾಯಿಸಿ ಪಂಪ್‌ಹೌಸ್ ನಿರ್ಮಿಸುವುದರಿಂದ ರೈಸಿಂಗ್ ಮೈನ್ 1 ರ ಪೈಪ್‌ನಲ್ಲಿ 410 ಮೀ. ಮತ್ತು ರೈಸಿಂಗ್ ಮೈನ್ 2 ರ ಪೈಪ್‌ನಲ್ಲಿ 275 ಮೀ. ಹೆಚ್ಚುವರಿಯಾಗಿರುವುದರಿಂದ.<br>4. ಸದರಿ ಯೋಜನೆಯ ಗ್ರಾವಿಟಿ ಮೈನ್‌ನಲ್ಲಿ ಪೈಪ್ ಬದಲಾವಣೆ ಹಾಗೂ ಅಲೈನ್‌ಮೆಂಟ್ ಬದಲಾವಣೆಯಿಂದಾಗಿ ಹೆಚ್ಚುವರಿ ಆರ್ಥಿಕ ಹೊರೆ ಉಂಟಾಗಿದ್ದು, ಪರಿಷ್ಕೃತ ಅಂದಾಜನ್ನು ತಯಾರಿಸಲಾಗಿದ್ದು. ಕಾವೇರಿ ನೀರಾವರಿ ನಿಗಮದಲ್ಲಿ 2019-20ನೇ ಸಾಲಿಗಾಗಿ ಅನುಮೋದಿಸಲಾದ ಕಾಮಗಾರಿಗಳ ಕಾರ್ಯಭಾರ ಅಧಿಕವಾಗಿರುವುದರಿಂದ ಕಾಮಗಾರಿಯನ್ನು ಕೈಗೆತ್ತಿಕೊಳ್ಳುವುದನ್ನು ಕೈಬಿಡುವಂತೆ ಆರ್ಥಿಕ ಇಲಾಖೆಯು ಸೂಚಿಸಿರುವುದರಿಂದ. |
| ಇ | ಈ ಕಾಮಗಾರಿಯು ತ್ವರಿತಗತಿಯಲ್ಲಿ ಪೂರ್ಣಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ; | ಭೂಸ್ವಾಧೀನ ಹೊರತುಪಡಿಸಿ/ ಮಿತಿಗೊಳಿಸಿ ರಸ್ತೆ ಬದಿಯ ಮುಖಾಂತರ ಅಲೈನ್‌ಮೆಂಟ್ ಅಂತಿಮಗೊಳಿಸಿ, ಪೈಪ್‌ಲೈನ್ ಅಳವಡಿಸಲು ಕ್ರಮ ಕೈಗೊಳ್ಳಲಾಗಿದೆ. ಉಳಿದ ಕಾಮಗಾರಿಗಳನ್ನು 2020-21ನೇ ಸಾಲಿನ ಆರ್ಥಿಕ ವರ್ಷದಲ್ಲಿ ಆದ್ಯತೆಯ ಮೇಲೆ ಅಗತ್ಯ ಅನುದಾನದೊಂದಿಗೆ ಕೈಗೊಳ್ಳಲು ಕ್ರಮವಹಿಸಲಾಗುವುದು. |
| ಈ | ಕಾಮಗಾರಿ ಪೂರ್ಣಗೊಂಡ ನಂತರ ಎಷ್ಟು ಕೆರೆಗಳಿಗೆ ನೀರು ಒದಗಿಸಲಾಗುವುದು? (ಪೂರ್ಣ ಮಾಹಿತಿ ನೀಡುವುದು) | ಕಾಮಗಾರಿ ಪೂರ್ಣಗೊಂಡ ನಂತರ ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕಿನ 66 ಕೆರೆಗಳು ಮತ್ತು ತುಮಕೂರು ಜಿಲ್ಲೆಯ ಕುಣಿಗಲ್ ತಾಲ್ಲೂಕಿನ 17 ಕೆರೆಗಳಿಗೆ, ಒಟ್ಟಾರೆಯಾಗಿ 83 ಕೆರೆಗಳಿಗೆ ನೀರನ್ನು ಒದಗಿಸಲಾಗುವುದು. |

*ಸಂಖ್ಯೆ:ಜಸಂಇ 48 ಎನ್‌ಎಲ್‌ಎ 2020*

(ರಮೇಶ್ ಎಲ್. ಜಾರಕಿಹೊಳಿ)
ಜಲಸಂಪನ್ಮೂಲ ಸಚಿವರು